# ಆಹಾ ಸುದ್ದಿ!

★ ಸಸಿತೋಟ



ಈಕೆಯ ಹೆಸರೇ ಮಿಸ್ ಝೀರೋ. ಲಂಡನ್ನಿನಲ್ಲಿ ನಡೆದ 'ಆಲ್ಟರ್‌ನೇಟಿವ್ ಮಿಸ್ ವರ್ಲ್ಡ್' ವಿಜೇತೆ. 'ಮಿಸ್ ವರ್ಲ್ಡ್', 'ಮಿಸ್ ಯೂನಿವರ್ಸ್' ಗೆಲ್ಲಲಾಗದವರು ಬೇಸರದಿಂದ ಉಗುರು ಕಚ್ಚುತ್ತ ಕೂಡ್ರಬೇಕಾಗಿಲ್ಲ. ಸೀದಾ ಲಂಡನ್ನಿಗೆ ತೆರಳಿ ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳಬಹುದು. ಲಿಂಗಭೇದವೂ ಇಲ್ಲವಂತೆ. ಆದರೂ ಟೈಟಲ್ ಮಾತ್ರ ಮಿಸ್ಸೇ.



ಚೀನಾದಲ್ಲಿ ಕಬಾಬ್ ಮಳಿಗೆಯಲ್ಲಿ ಗ್ರಾಹಕರನ್ನು ಆಕರ್ಷಿಸುವ ನೃತ್ಯದ ಪರಿಯಿದು. ಪುರುಷನೇ ಮಹಿಳೆಯರ ದಿರಿಸು ತೊಟ್ಟು 'ಉದರ ನಿಮಿತ್ತಂ ಬಹುಕೃತ ವೇಷಂ' ಗೆ ಉದಾಹರಣೆಯಾಗಿದ್ದಾನೆ. ನಮ್ಮಲ್ಲಿ ವ್ಯಾಪಾರ ಇನ್ನೂ ತೀರಾ ಈ ಮಟ್ಟಕ್ಕೆ ಹೋಗಿಲ್ಲ ಬಿಡಿ.

ಕಚೇರಿಗೆ ರಜೆ ಹಾಕಲು ಯಾವ್ಯಾವ ನೆಪ ಹೇಳುತ್ತಾರೆಂದು ಅಮೆರಿಕದ ಶಿಕಾಗೋದಲ್ಲಿ ಪಟ್ಟಿಯನ್ನೇ ಮಾಡಿ ಆನ್‌ಲೈನ್‌ನಲ್ಲಿ ಪ್ರಕಟಿಸಲಾಗಿದೆಯಂತೆ. ಶೌಚಾಲಯದಲ್ಲಿ ಕೂತಾಗ ಕಾಲು ಮುರಿಯಿತು, ಬಿಪಿ ನೋಡಿಕೊಳ್ಳುವಾಗ ಮಷಿನ್ನೇ ಕೈಗೆ ಹಿಡಿದುಕೊಂಡುಬಿಟ್ಟಿತು, ಆಕಸ್ಮಿಕವಾಗಿ ವಿಮಾನವೊಂದನ್ನು ಏರಿಬಿಟ್ಟೆ, ಸಮವಸ್ತ್ರವನ್ನು ಮೈಕ್ರೋವೇವ್‌ನಲ್ಲಿ ಒಣಗಿಸುವಾಗ ಸುಟ್ಟು ಹೋಯಿತು... ಇತ್ಯಾದಿ. ಇವುಗಳಿಗೆ ಹೋಲಿಸಿದರೆ 'ಆರಾಂ ಇರಲಿಲ್ಲ' ಎಂಬ ಭಾರತೀಯರ ಮಾಮೂಲು ಕಾರಣ ಸಪ್ಪೆ ಸಪ್ಪೆ.

ಮಾಸ್ಕೋದಲ್ಲಿ ಕಲಾವಿದ ಪಾವ್‌ಲೆನ್ಸ್ಕಿ ಮಾನಸಿಕ ರೋಗ ಆಸ್ಪತ್ರೆ ಕಟ್ಟಡದ ಮೇಲೆ ಕುಳಿತು ತನ್ನ ಕಿವಿ ತುದಿಯನ್ನು ತಾನೇ ಕತ್ತರಿಸಿಕೊಂಡ. ಕಲಾವಿದನಿಗೇನೂ ಮಾನಸಿಕ ಅಸ್ವಸ್ಥತೆ ಉಂಟಾಗಿಲ್ಲ. ಅಲ್ಲಿಯ ಸರ್ಕಾರ ಪ್ರತಿಭಟನೆ ಹಮ್ಮಿಕೊಳ್ಳುವವರನ್ನು, ತನಗೆ ಬೇಡದ ವ್ಯಕ್ತಿಗಳನ್ನು ನಿವಾರಿಸಲು ಮಾನಸಿಕ ಆಸ್ಪತ್ರೆಗಳಿಗೆ ಬಲವಂತವಾಗಿ ಸೇರಿಸುತ್ತಿದೆಯಂತೆ. ಇದನ್ನು ಪ್ರತಿಭಟಿಸಲು ಕಿವಿ ಕತ್ತರಿಸಿಕೊಂಡ ಕಲಾವಿದ ಮತ್ತೆ ಅಲ್ಲಿಗೇ ಹೋಗಿದ್ದು ಮಾತ್ರ ದುರಂತ.



ಭಾರ ಹೊರುವಲ್ಲಿ ಪುರುಷರಿಗಿಂತ ಮಹಿಳೆಯರೇ ಹೆಚ್ಚು ಬಲಶಾಲಿಯಂತೆ. ಹಾಗಂತ ಅಮೆರಿಕದಲ್ಲಿ ನಡೆದ ಅಧ್ಯಯನವೊಂದು ಹೇಳಿದೆ. ಸಣ್ಣ ಇರುವೆಗಳು ದೊಡ್ಡ ದೊಡ್ಡ ಆಹಾರದ ಕಣಗಳನ್ನು ಒಯ್ಯುವುದಿಲ್ಲವೇ ಹಾಗೆ. ಮಹಿಳೆ ಸಂಸಾರದ ಭಾರವನ್ನೇ ಹೊರುವಾಗ ಸಾಮಗ್ರಿಗಳ ಭಾರ ಹೊರುವುದೇನು ಮಹಾ!



ಸೌದಿ ಅರೇಬಿಯಾದ ದೊರೆ ಅಬ್ದುಲ್ಲಾ ಇತ್ತೀಚೆಗೆ ಮಗಳ ಮದುವೆ ಮಾಡಿದ್ದು, ಸಂಪೂರ್ಣ ಚಿನ್ನದ ಶೌಚಾಲಯವನ್ನು ಉಡುಗೊರೆಯಾಗಿ ನೀಡಿದನಂತೆ. ಶೌಚಾಲಯ ಅಸಲಿ ಹಳದಿ ಲೋಹದ್ದಾಗಿದ್ದರೂ, ಶೌಚ ಮಾತ್ರ ಅಪ್ಪಟ ಜೈವಿಕ ಎಂದು ಜೈವಿಕ ವಾದಿಗಳು ವಾದಿಸಬಹುದು.